ಗಮನ ಸೆಳೆಯುವ ಸೂಚನೆ

(i) ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗಿರುವ ಬಗ್ಗೆ

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ, ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪ್ರಮಾಣ ಕಡಿಮೆ ಆಗಿರುವ ಬಗ್ಗೆ ಸನ್ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಸಾಮಾನ್ಯವಾಗಿ ನಗರಕ್ಕೆ ಸಂವಾರು ೭೨ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗಲಿದ್ದು, ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಕಡಿತ ಹಾಗೂ ವೋಲ್ಟೇಜ್ ಏರಿಳಿತದಿಂದಾಗಿ ನೀರಿನ ಪ್ರಮಾಣದಲ್ಲಿ ಗಣನೀಯವಾಗಿ ಇಳಿಮುಖವಾಗಿದೆ. ತತ್ಪರಿಣಾಮವಾಗಿ ನಗರದ ಜನತೆಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ಸ್ವಲ್ಪ ಅಡಚಣೆಯಾಗಿರುತ್ತದೆ. ಆದರೆ ವಿದ್ಯುಚ್ಛಕ್ತಿ ಮಂಡಳಿಯವರ ಪ್ರಯತ್ನದಿಂದಾಗಿ, ಪರಿಸ್ಥಿತಿ ಇತ್ತೀಚಿನ ಕೆಲವು ದಿನಗಳಲ್ಲಿ ಸುಧಾರಿಸಿದೆ.

ಮೇಲಿನ ಕಾರಣಗಳಿಂದಾಗಿ, ನಗರದ ಇಂದಿರಾನಗರ, ರಾಜಾಜಿನಗರದ ಕೆಲವು ಭಾಗಗಳು, ಸೆಂಟ್ ಜಾನ್ಸ್ ರಸ್ತೆ ಪ್ರದೇಶ, ಕ್ಯಾಮೆಲ್ರಿ ರಸ್ತೆ ಪ್ರದೇಶ ಹಾಗೂ ದಂಡಿನ ಪ್ರದೇಶಗಳಲ್ಲಿ ನೀರಿನ ಸರಬರಾಜು ಅಷ್ಟು ಸಮಾಧಾನಕರವಾಗಿರುವುದಿಲ್ಲ.

ಕಾವೇರಿ ಎರಡನೇ ಹಂತದ ಯೋಜನೆಯಿಂದ ಇನ್ನೂ ೧೦ ದಶಲಕ್ಷ ಗ್ಯಾಲನ್ ನೀರನ್ನು ಹೆಚ್ಚಿಗೆ ಪಂಪ್ ಮಾಡಲು ಅವಶ್ಯವಾಗಿರುವ ೩ ಗಾಳಿಯ ಕವಾಟಗಳ (ಏರ್ ಚೇಂಬರ್ಸ್) ಪೈಕಿ ೨ ಕವಾಟುಗಳು ಈಗಾಗಲೇ ಯೋಜನೆಯ ಸ್ಥಳಕ್ಕೆ ಬಂದಿದ್ದು ಅದರಲ್ಲಿ ಒಂದನ್ನು ಹಾರೋಹಳ್ಳಿ ಬಳಿ ಈಗಾಗಲೇ ಅಳವಡಿಸಲಾಗಿದ್ದು ಮತ್ತೊಂದನ್ನು ತಾಟಗುಣಿಯ ಬಳಿ ಅಳವಡಿಸುವ ಕಾರ್ಯ ನಡೆಯುತ್ತಿದೆ. ಉಳಿದ ಒಂದು ಗಾಳಿಕವಾಟವನ್ನು ತಯಾರಿಸಲಾಗಿದ್ದು, ಅದನ್ನು ಯೋಜನೆಯ ಸ್ಥಳಕ್ಕೆ ಈ ತಿಂಗಳ ಅಂತ್ಯದಲ್ಲಿ ತರುವ ನಿರೀಕ್ಷೆಯಿದೆ. ಒಟ್ಟಾರೆ ಎರಡನೆಯ ಪಂಪನ್ನು ಫೆಬ್ರುವರಿ ಮಾಹೆಯಲ್ಲಿ ಕಾರ್ಯಾರಂಭ ಮಾಡಲು ಆಣಿ ಮಾಡಲಾಗಿದೆ. ತದನಂತರ ನೀರು ಸರಬರಾಜಿನ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಕಂಡು ಬರುವುದೆಂದು ಆಶಿಸಲಾಗಿದೆ. ಕಾವೇರಿ ಎರಡನೇ ಹಂತದ ಮೂರನೇ ಪಂಪನ್ನು ಕಾರ್ಯಗತಗೊಳಿಸಲು ಬೇಕಾಗಿರುವ ನಾಲ್ಕು ಗಾಳಿಯ ಕವಾಟಗಳನ್ನು ಯೋಜನೆಯ ಸ್ಥಳದಲ್ಲಿ ಸ್ವೀಕರಿಸಿದ ನಂತರ ಇನ್ನು ಹತ್ತು ದಶಲಕ್ಷ ಗ್ಯಾಲನ್ ನೀರನ್ನು ನಗರಕ್ಕೆ ಒದಗಿಸಲಾಗುವುದು. ಈ ಕಾರ್ಯಪನ್ನು ಇದೇ ಜುಲೈ ಮಾಹೆಯಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.

ವಿದ್ಯುತ್ ಕಡಿತ ಹಾಗೂ ವೋಲ್ಟೇಜ್ ಏರಿಳಿತದಿಂದಾಗಿ ಉಂಟಾದ ಪರಿಸ್ಥಿತಿಯನ್ನು ಹಾಗೂ ನೀರಿನ ಸರಬರಾಜಿನ ಮೇಲಾದ ಪರಿಣಾಮಗಳನ್ನು ಚರ್ಚಿಸಲು ನನ್ನ ಅಧ್ಯಕ್ಷತೆಯಲ್ಲಿ ನಗರದ ಶಾಸಕರನ್ನೊಳಗೊಂಡ ಸಭೆಯನ್ನು ದಿನಾಂಕ ೧-೧೨-೧೯೮೩ರಂದು ಕರೆಯಲಾಗಿತ್ತು. ಅಂದಿನ ಸಭೆಯಲ್ಲಿ ಶಾಸಕರು ವ್ಯಕ್ತಪಡಿಸಿದ ಸಲಹೆಗಳ ಮೇರೆಗೆ ನಗರದ ಜಲಮಂಡಳಿಯು ೧೦೭ ಕೊಳವೆ ಬಾವಿಗಳನ್ನು ತೋಡಲು ಹಾಗೂ ೩೪ ಲಾರಿಗಳನ್ನು ಕೊಂಡುಕೊಳ್ಳಲು ಸುಮಾರು ೧ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದೆ. ಜಲಮಂಡಳಿಯ ಸಲಹೆಯು ಸರ್ಕಾರದ ಶೀಘ್ರ ಪರಿಶೀಲನೆಯಲ್ಲಿದೆ.

ಸದ್ಯಕ್ಕೆ ೧೪ ಲಾರಿಗಳನ್ನು ಟ್ಯಾಂಕರ್‌ಗಳ ಸಹಿತ ಸಂಕಷ್ಟ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಉಪಯೋಗಿಸಲಾಗುತ್ತಿದೆ. ಮೇಲಾಗಿ ಜಲಮಂಡಳಿಯು ಇನ್ನೂ ೧೦ ನೀರಿನ ಟ್ಯಾಂಕರುಗಳನ್ನು ಪಡೆಯಲು ಕರ್ನಾಟಕ ಸರ್ಕಾರದ ಉದ್ಯಮವಾದ ಕಿಂಕೋ ಕಾರ್ಖಾನೆಗೆ ಸರಬರಾಜು ಮಾಡಲು ಕೋರಿದೆ. ಟ್ಯಾಂಕರ್‌ಗಳನ್ನು ಇನ್ನೂ ಒಂದು ತಿಂಗಳೊಳಗಾಗಿ ಪಡೆಯುವ ಆಶಯವಿದೆ. ಟ್ಯಾಂಕರುಗಳನ್ನು ಪಡೆದ ನಂತರ ಅವುಗಳನ್ನು ಉಪಯೋಗಿಸಿ ಪ್ರಕ್ಷುಬ್ಧ ಪ್ರದೇಶಗಳಿಗೆ ನೀರನ್ನು ಉತ್ತಮ ರೀತಿಯಲ್ಲಿ ಸರಬರಾಜು ಮಾಡಲಾಗುವುದು.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಈ ವಿಷಯದ ಬಗ್ಗೆ ನಾವು ಪ್ರತಿ ವರ್ಷವೂ ಪ್ರಶ್ನೆ ಕೇಳಿದ್ದೇವೆ, ಪ್ರತಿವರ್ಷವೂ ಇದೇ ರೀತಿ ಉತ್ತರ ಬರುತ್ತಿದೆ. ಹೀಗಾದರೆ ಬೆಂಗಳೂರು ಜನಕ್ಕೆ ವಿಮೋಚನೆ ಎಲ್ಲಿದೆ ಎನ್ನುವಷ್ಟಕ್ಕೆ ಪ್ರಶ್ನೆ ಬಂದಿದೆ. ಈಗ ಮಾನ್ಯ ಮಂತ್ರಿಗಳು ಹೇಳಿದರು ೭೨ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗಲಿದ್ದು ಇತ್ತೀಚಿನ ದಿನಗಳಲ್ಲಿ

ವಿದ್ಯುತ್ ಕಡಿತ ಹಾಗೂ ಓಲ್ಟೇಜ್ ಏರಿಳಿತದಿಂದಾಗಿ ನೀರಿನ ಪ್ರಮಾಣದಲ್ಲಿ ಗಣನೀಯವಾಗಿ ಇಳಿಮುಖವಾಗಿದೆ ಎಂದು ಹೇಳಿದರು. ನನಗೆ ತಿಳಿದಹಾಗೆ ಇದು ಎಷ್ಟು ಇಳಿಮುಖವಾಗಿದೆ ಎಂದರೆ ಕೇವಲ ೫೦ ದಶಲಕ್ಷ ಗ್ಯಾಲನ್ ನೀರು ಮಾತ್ರ ಬರುತ್ತಿದೆ, ಆದರೆ ಬೆಂಗಳೂರಿನ ಜನ ಸಂಖ್ಯೆ ಏರುತ್ತಿದೆ. ದಿನೇ ದಿನೇ ಹೊಸದಾಗಿ ಕನೆಕ್ಷನ್ ಕೊಡುತ್ತಿದ್ದೀರಿ ಇದರ ಜೊತೆಯಲ್ಲಿ ಬೇರೆ ಬೇರೆ ಕಾರ್ಖಾನೆಗಳಿಗೆ ಕೊಡುತ್ತಿದ್ದೀರಿ ಇದಕ್ಕೆ ಸರಿಯಾದ ಪ್ರಮಾಣದಲ್ಲಿ ನೀರನ್ನು ಕೊಡುವ ಬದಲು ಕೇವಲ ೫೦ ದಶಲಕ್ಷ ಗ್ಯಾಲನ್ ನೀರನ್ನು ಮಾತ್ರ ಬೆಂಗಳೂರು ನಗರಕ್ಕೆ ಕೊಡುತ್ತಿದ್ದೀರಿ. ಆದುದರಿಂದ ನಾವು ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದರ ಜೊತೆಯಲ್ಲಿ ಮಾನ್ಯ ಮಂತ್ರಿಗಳವರು ಉತ್ತರ ಕೊಡುತ್ತಾ ಇಂದಿರಾನಗರ, ರಾಜಾಜಿನಗರದ ಕೆಲವು ಭಾಗಗಳು ಕ್ಯಾವೆಲ್‌ರಿ ರಸ್ತೆ, ಸೈಂಟ್ ಜಾನ್ ರಸ್ತೆ ಹಾಗೂ ದಂಡಿನ ಪ್ರದೇಶಗಳಲ್ಲಿ ನಿರಿನ ಸರಬರಾಜು ಅಷ್ಟು ಸಮಾಧಾನಕರವಾಗಿರುವುದಿಲ್ಲವೆಂದು ಹೇಳಿದ್ದಾರೆ. ಆದರೆ ಇನ್ನೂ ಬೇರೆ ಬೇರೆ ವಿಭಾಗಗಳಲ್ಲಿರುವವರು ಯಾರೂ ಇದರ ಬಗ್ಗೆ ದೂರನ್ನು ಕೊಟ್ಟಿಲ್ಲವೆ ? ಮಂತ್ರಿಗಳವರು ಈ ರೀತಿಯಾಗಿ ಅಧಿಕಾರಿಗಳಿಂದ ಉತ್ತರ ಪಡೆದುಕೊಂಡು ಈ ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಇವರು ದಿನಾಂಕ ೧೯-೧೨-೨೩ ರಂದು ನಡೆಸಿದ ಸಭೆಯಲ್ಲಿ ನಗರದ ಎಲ್ಲಾ ಶಾಸಕರು ಅವರವರ ಕ್ಷೇತ್ರದಲ್ಲಿರತಕ್ಕ ನೀರಿನ ಕ್ಷಾಮದ ಬಗ್ಗೆ ಹೇಳಿದ್ದಾರೆ. ಇವರು ಉತ್ತರದಲ್ಲಿ ಕೇವಲ ೪-೬ ಕಡೆಗಳಲ್ಲಿ ಇರತಕ್ಕ ಬವಣೆಯ ಬಗ್ಗೆ ಮಾತ್ರ ಹೇಳಿದ್ದಾರೆ, ಇದರಿಂದ ಅವರು ಎಷ್ಟರಮಟ್ಟಿಗೆ ಈ ಸಭೆಯನ್ನು ತಪ್ಪುದಾರಿಗೆ ಎಳೆದಂತಾಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಇವತ್ತು ರಾಜಾಜಿನಗರ, ಮಲ್ಲೇಶ್ವರಂ, ಕಬ್ಬನ್‌ಪೇಟೆ ಇನ್ನು ಅನೇಕ ಕಡೆಗಳಲ್ಲಿ ನೀರು ಬರುತ್ತಿಲ್ಲ, ಇವರ ಹೇಳಿಕೆಯ ಪ್ರಕಾರವೇ ದಿನಕ್ಕೆ ೮ ಗಂಟೆಗಳ ಕಾಲ ನೀರು ಕೊಡುತ್ತೇವೆಂದು ಹೇಳುತ್ತಾರೆ, ಆದರೆ ಕೆಲವು ಕಡೆಗಳಲ್ಲಿ ಅರ್ಧ ಗಂಟೆ, ಒಂದು ಗಂಟೆ ಕೂಡ ನೀರು ಬರುತ್ತಿಲ್ಲ. ಹಿಂದೆ ನಾವು ಈ ನಿರಿನ ಕ್ಷಾಮವನ್ನು ಕೇವಲ ಬೇಸಿಗೆ ಕಾಲದಲ್ಲಿ ಮಾತ್ರ ಅನುಭವಿಸುತ್ತಿದ್ದೆವು. ಆದರೆ ಈಗ ಏನಾಗಿದೆ ಎಂದರೆ ವರ್ಷವೆಲ್ಲಾ ನೀರಿನ ಕ್ಷಾಮವನ್ನು ಎದುರಿಸತಕ್ಕಂತ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು.—ನೀವೇ ಭಾಷಣ ಮಾಡುತ್ತಾ ಹೋದರೆ ಹೇಗೆ. ಇನ್ನು ಬೇರೆಯವರಿಗೆ ಏನು ಹೇಳುವುದು ?

ಶ್ರೀ ಪಿ. ರಾಂದೇವ್.—ತಾವು ಸಹ ಹೊಸದಾಗಿ ಮನೆ ಕಟ್ಟುತ್ತಿದ್ದೀರಿ, ತಪ್ಪು ಮನೆಗೂ ನೀರು ಬರುತ್ತದೆಯೋ ಇಲ್ಲವೋ ನೋಡಿ ಗೊತ್ತಾಗುತ್ತದೆ. ವಾಟರ ಸಪ್ಲೈ ಬೋರ್ಡಿನ ಚೀಫ್ ಇಂಜಿನೀಯರ್ ಆಗಿದ್ದ ಗುಲಾಮ್ ಅಹಮದ್‌ರವರು ೨೪ ಗಂಟೆಗಳ ಕಾಲ ನೀರು ಸರಬರಾಜು ಮಾಡತಕ್ಕ ಯೋಜನೆಯನ್ನು ಕೊಟ್ಟಿದರು. ಆದರೆ ಕೆಲವು ಅಧಿಕಾರಿಗಳು ಕುತಂತ್ರ ಮಾಡಿದ್ದರಿಂದ ೨೪ ಗಂಟೆಗಳ ಕಾಲ ನೀರು ಒದಗಿಸತಕ್ಕಂತ ಯೋಜನೆ ಅಲ್ಲಿಗೇ ಬಿದ್ದುಹೋಯಿತು. ಕೆಲವು ಅಧಿಕಾರಿಗಳು ಹಣವನ್ನು ಪಡೆಯುವುದಕ್ಕೋಸ್ಕರವಾಗಿ ಹೋಟೆಲ್‌ನವರಿಗೆ ಮತ್ತು ಇಂಡಸ್ಟ್ರಿಸ್‌ನವರಿಗೆ ೧ ಗಂಟೆ, ೨ ಗಂಟೆಗಳ ಕಾಲ ನೀರನ್ನು ಬಿಡುವ ಹಾಗೆ ರಿಸ್ಟ್ರಿಕ್ಷನ್ ಇಟ್ಟುಕೊಳ್ಳುವುದಕ್ಕೋಸ್ಕರವಾಗಿ ೨೪ ಗಂಟೆಗಳ ನೀರು ಸರಬರಾಜು ಯೋಜನೆಯನ್ನು ತಪ್ಪಿಸಿದರು. ಆದ್ದರಿಂದ ಇನ್ನು ಮುಂದಾದರೂ ನೀರಿನ ಕ್ಷಾಮವನ್ನು ತಪ್ಪಿಸುವುದಕ್ಕೋಸ್ಕರವಾಗಿ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ, ಈ ವರ್ಷ ಇನ್ನು ಭೀಕರವಾದ ಬೇಸಿಗೆ ಬರುತ್ತಿದೆ. ಆದರಲ್ಲಿ ಸಂದೇಹವಿಲ್ಲ ನಾವು ಈಗಾಗಲೇ ಅದನ್ನು ಅನುಭವಿಸುತ್ತಿದ್ದೇವೆ. ಆದ್ದರಿಂದ ಇದರ ಬಗ್ಗೆ ತಾವು ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ.

೨ನೇ ಹಂತದ ಕಾವೇರಿ ಯೋಜನೆಯನ್ನು ೧೯೮೧ಕ್ಕೆ ಮುಗಿಸಬೇಕಾಗಿತ್ತು. ಈಗ ೧೯೮೨, ೮೩, ೮೪ನೇ ಇಸವಿ ಬಂದಿರುವುದರಿಂದ, ಇದನ್ನು ಯಾವಾಗ ಮುಗಿಸುತ್ತೀರಿ. ೩ನೇ ಹಂತದ ಯೋಜನೆಯನ್ನು ಯಾವಾಗ ಪ್ರಾರಂಭಿಸುತ್ತೀರಿ, ಇದಕ್ಕೆ ಸೂಕ್ತವಾದ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಸದ್ಯಸರು ಹೇಳಿದ ರೀತಿಯಲ್ಲಿ ಪ್ರತಿ ವರ್ಷವೂ ನೀರಿನ ಕ್ಷಾಮ ಹೆಚ್ಚಾಗುತ್ತಾ ಹೋಗುತ್ತದೆ. ನಿರಿನ ಪ್ರಮಾಣದ ಪೂರೈಕೆ ಕೂಡ ಕಡಿಮೆಯಾಗುತ್ತಿದೆ, ೨೪ ಗಂಟೆ ನೀರು ಸರಬರಾಜು ಮಾಡುವ ಆಶ್ವಾಸನೆಯನ್ನು ಯಾವ ಅಧಿಕಾರಿ ಕೊಟ್ಟರೋ ನನಗೆ ಗೊತ್ತಿಲ್ಲ. ೨೪ ಗಂಟೆಗಳ ಕಾಲ ನೀರು ಸರಬರಾಜು ಮಾಡುವುದಕ್ಕೆ ಆಶ್ವಾಸನೆ ಕೊಡುವುದಕ್ಕೆ ಆಗುವುದಿಲ್ಲ. ಇದು ಇರುವಂಥ ಸ್ಥಿತಿ. ಇದಕ್ಕೆ ನಾವು ಹಲವಾರು ಕಾರ್ಯಕ್ರಮ

ಗಳನ್ನು ಹಾಕಿ ಕೊಂಡಿದ್ದೇವೆ. ೧೦ ಮಿಲಿಯನ್ ಗ್ಯಾಲನ್ ನೀರು ಕೊಡುವಂತ ಪರಿಸ್ಥಿತಿ ಬಂದಾಗ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತದೆ. ಮತ್ತೆ ನನ್ನ ಉತ್ತರದಲ್ಲಿ ಕೆಲವಾರು ಪ್ರದೇಶಗಳನ್ನು ಸೂಚನೆ ಮಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಗೆ ನಾನು ಸಹಿ ಹಾಕಿ ಕೊಡಲಿಲ್ಲಾ. ಆದರೂ ಕೂಡ ಇದು ಎಲ್ಲರ ಗಮನವನ್ನು ಸೆಳೆದಿದೆ. ಇದ್ದಕ್ಕಿಂತ ಇನ್ನು ಹೆಚ್ಚಿಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯಬೇಕು.

ಶ್ರೀ ಎಂ. ಚಂದ್ರಶೇಖರ್.—ನಾನು ಒಬ್ಬ ಶಾಸಕನಾಗಿ ನಿಮ್ಮ ಜೊತೆಯಲ್ಲಿ ಇದ್ದುಕೊಂಡು ಬೆಂಗಳೂರು ನಗರ ನೀರು ಕ್ಷಾಮದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದಕ್ಕೆ ನಾವು ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೆವೆ ಎಂದರೆ ಈಗಾಗಲೇ ೧೪ ಟ್ಯಾಂಕರುಗಳು ಸಿದ್ಧವಾಗಿವೆ, ಇನ್ನು ೧೦ ಟ್ಯಾಂಕರ್‌ಗಳು ಫೆಬ್ರವರಿಯೊಳಗಾಗಿ ಸಿದ್ಧವಾಗುತ್ತವೆ. ಆದು ಎಲ್ಲೆಲ್ಲಿ ನೀರಿನ ಬವಣೆ ಇರುತ್ತದೆ. ಅಲ್ಲಿ ಸಪ್ಲೈ ಮಾಡುವುದಕ್ಕೆ. ಅಲ್ಲದೆ ೧೮ ಎಂ.ಜಿ.ಡಿ. ನೀರು ಬರುವುದಕ್ಕೆ ನಿಗದಿಯಾಗಿದೆ, ಆದು ಫೆಬ್ರವರಿಯಲ್ಲಿ ಬರುತ್ತದೆ. ಇದು ಕೆಲವಾರು ಪ್ರದೆ ಶದಲ್ಲಿ ಮಾತ್ರ ಇದೆ. ಬೇರೆ ಕಡೆಯಲ್ಲೂ ಆದೇ ಪರಿಸ್ಥಿತಿ ಅಂದರೆ ಅದಕ್ಕೆ ಮೊದಲನೇ ಕಾರಣ ಮತ್ತು ಮುಖ್ಯ ಕಾರಣ ಅಂದರೆ ವಿದ್ಯುಚ್ಛಕ್ತಿ ಏರಿಳಿತ. ಇದು ಸಾಮಾನ್ಯವಾಗಿ ಟ್ರಿಪ್ಪಿಂಗ್ಸ್ ಜಾಸ್ತಿ ಇರುವುದರಿಂದ ಮಲ್ಲೇಶ್ವರ, ರಾಜಾಜಿನಗರ, ಬಸವನಗುಡಿ, ಜಯನಗರ ಎಲ್ಲಾ ಕಡೆಯಲ್ಲೂ ಈ ರೀತಿ ಆಗುತ್ತಿದೆ. ಜನವರಿ ಒಂದನೇ ತಾರೀಖಿನಿಂದ ಓಲ್ಟೇಜ್ ವೇರಿಯೇಷನ್ ತಹಬಂದಿಗೆ ಬಂದಿದೆ. ಇದರಿಂದ ನೀರು ಸರಬರಾಜು ಇರುವುದರಲ್ಲಿ ಉತ್ತಮ ರೀತಿಯಲ್ಲಿ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರದಲ್ಲಿ ಎಲ್ಲೂ ನೀರಿಲ್ಲ ಎಂದು ಹೇಳುತ್ತಾ ಇದ್ದಾರೆ, ಇವರ ಮನೆಗೆ ಹೋಗೋಣ.

ಶ್ರೀ ಎಂ. ಚಂದ್ರಶೇಖರ್.—ಮೂರನೇ ಹಂತದ ಯೋಜನೆಯನ್ನು ತೀವ್ರಗತಿಯಿಂದ ತೆಗೆದುಕೊಳ್ಳಬೇಕಾಗಿದೆ. ೨೪೦ ಕೋಟಿ ರೂಪಾಯಿಗಳ ಅಂದಾಜು ಪಟ್ಟಿ ಸಿದ್ಧವಾಗಿದೆ, ಅದಕ್ಕೆ ಹಣದ ವ್ಯವಸ್ಥೆಯಾಗಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದೊಂದಿಗೆ ಈಗಾಗಲೆ ವಿಚಾರ ಮಾಡುತ್ತಿದ್ದಾರೆ. ಅದನ್ನು ಯೋಜನೆಯಲ್ಲಿ ಸೇರಿಸುವ ರೀತಿಯಲ್ಲಿ ಅದಕ್ಕೆ ಬೇರೆ ಹಣದ ವ್ಯವಸ್ಥೆಯಾಗಬೇಕು. ಕೇಂದ್ರ ಸರ್ಕಾರದೊಂದಿಗೆ ಮಾನ್ಯ ಮುಖ್ಯ ಮಂತ್ರಿಗಳು ಚರ್ಚೆಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರಕ್ಕೂ ಕೂಡ ತೀವ್ರತೆಯಿದೆ, ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನನ್ನ ಪರವಾಗಿ ಕೇಳಿದರು ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರದಲ್ಲಿ ೧೦ ವರ್ಷಗಳ ಹಿಂದೆ ಹದಿನಾರೂವರೆ ಲಕ್ಷ ಜನಸಂಖ್ಯೆ ಇತ್ತು. ಇವತ್ತು ೩೧ ಲಕ್ಷ ಇದೆ. ಬೆಂಗಳೂರಿಗೆ ಶಾಸಕರು ಬಂದು ನಿವೇಶನಗಳನ್ನು ಕೇಳಿ ಪಡೆದುಕೊಂಡು ಬೆಂಗಳೂರು ನಿವಾಸಿಗಳೇ ಆಗುತ್ತಿದ್ದಾರೆ. ಹೀಗಾಗಿ ಜನಸಂಖ್ಯೆ ಹೆಚ್ಚಾಗುತ್ತಿದೆ. ನಮಗೆ ಬಂದಿರತಕ್ಕ ಕಷ್ಟವನ್ನು ನೀವೂ ಕೂಡ ಅನುಭವಿಸಬೇಕಾಗಿ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೇ ಕಷ್ಟ ಬಂದರೆ, ಮಾನ್ಯ ಅಧ್ಯಕ್ಷರಿಗೇ ನೀರಿನ ಕೊರತೆ ಬಂದಮೇಲೆ ಯಾವ ರೀತಿ ಬಗೆಹರಿಸುತ್ತಾರೆ.

ಉತ್ತರ ಇಲ್ಲ.

(ii) ರಾಯಚೂರಿನಲ್ಲಿ ಸರ್ಕಾರಿ ಏಜೆನ್ಸಿ ಮುಖಾಂತರ ಹಾಲಿನ ಸರಬರಾಜು ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಡಾ।। ಸಂಗಮೇಶ್ವರ ಸರ್ದಾರ್.—ಮಾನ್ಯ ಅಧ್ಯಕ್ಷರೆ. ರಾಯಚೂರಿನಲ್ಲಿ ಸರ್ಕಾರಿ ಏಜೆನ್ಸಿ ಮುಖಾಂತರ ಹಾಲಿನ ಸರಬರಾಜು ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಪಶುಸಂಗೋಪನ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಒಂದು ಹೇಳಿಕೆಯನ್ನು ಮಾಡುತ್ತೇನೆ.